MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 12-4-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಭಾರತದಿಂದ ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಪೌಲ್ಟ್ರಿ ಉತ್ಪಾದನೆಗಳ ರಫ್ತು ಅಭಿವೃದ್ಧಿ ಹೆಚ್ಚಳಕ್ಕೆ ಕ್ರಮ

ಉಕ್ರೈನ್ ಸಂಘರ್ಷದಿಂದ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪೌಲ್ಟ್ರಿ ಉತ್ಪಾದನೆ ಪೂರೈಕೆಯಲ್ಲಿ ವ್ಯತ್ಯಯವಾಗಿರುವುದರಿಂದ, ಭಾರತ ಕೋಳಿಮೊಟ್ಟೆ ಹಾಗೂ ಪೌಲ್ಟ್ರಿ ಉತ್ಪಾದನೆಗಳನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಗೆ ರಫ್ತು ಹೆಚ್ಚಳಗೊಳಿಸಲು ಯೋಜನೆ ರೂಪಿಸುತ್ತಿದೆಯೆನ್ನಲಾಗಿದೆ. ಉಕ್ರೈನ್ ಜಾಗತಿಕ ಮಾರುಕಟ್ಟೆಯ ಪ್ರಮುಖ ಪೌಲ್ಟ್ರಿ ಉತ್ಪಾದಕ ಹಾಗೂ ರಫ್ತು ಮಾಡುವ ದೇಶವಾಗಿತ್ತು. ಭಾರತದಿಂದ ಸೌದಿ ಅರೇಬಿಯಾ, ಯು.ಎ.ಇ ಹಾಗೂ ಇತರ ರಾಷ್ಟ್ರಗಳಿಗೆ ಪೌಲ್ಟ್ರಿ ಉತ್ಪಾದನೆಗಳ ರಫ್ತು ಮೊದಲು ಯೋಜಿಸಲಾಗುತ್ತಿದೆಯೆನ್ನಲಾಗಿದೆ. ಒಮಾನ್, ಇಂಡೋನೇಶಿಯಾ, ರಷ್ಯಾ, ಜಪಾನ್, ವಿಯೆಟ್ನಾಂಗಳಿಗೆ ಭಾರತದಿಂದ ಪೌಲ್ಟ್ರಿ ಉತ್ಪಾದನೆ ಮೊಟ್ಟೆ ರಫ್ತಾಗುತ್ತಿತ್ತು. ಅದರೊಂದಿಗೆ ಈಗ ಇತರ ಜಾಗತಿಕ ಮಾರುಕಟ್ಟೆಗಳಿಗೂ ಭಾರತದಿಂದ ರಫ್ತು ವಿಸ್ತರಣೆಗೊಳಿಸಲು ಯೋಜಿಸಲಾಗುತ್ತಿದೆಯೆನ್ನಲಾಗಿದೆ.

## ಪಾಮೆಣ್ಣೆ ದರ ಮತ್ತೆ ಹೆಚ್ಚಳದತ್ತ

ಪೂರೈಕೆ ಹಾಗೂ ಬೇಡಿಕೆಯನ್ವಯ ಪಾಮೆಣ್ಣೆ ಮಲೇಶಿಯನ್ ಫ್ಯೂಚರ್ ದರ ಮತ್ತು ಹೆಚ್ಚಳ ಕಂಡಿದೆ. ಸೋಯಾ ಎಣ್ಣೆ ಪೂರೈಕೆ ಬಿಗುವಿನಿಂದ ಕೂಡಿರುವ ದತ್ತಾಂಶಗಳ ಸಂಗ್ರಹದಿಂದ ಪಾಮೆಣ್ಣೆ ದರ ಹೆಚ್ಚಳಗೊಂಡಿತು. ಎಪ್ರಿಲ್ 1–10 ತನಕ ಮಲೇಶೀಯನ್ ಪಾಮೆಣ್ಣೆ ರಫ್ತು 25 ಶೇಕಡಾ ಇಳಿಕೆ ಕಂಡು 278,621 ಟನ್‌ಗಲಾಗಿವೆ (ಮಾರ್ಚ ತಿಂಗಳ ಇದೇ ಅವಧಿಗೆ ಹೋಲಿಸಿದಾಗ) ಸೂರ್ಯಕಾಂತಿ ಎಣ್ಣೆ ಹಾಗೂ ಸಾಸಿವೆ ಎಣ್ಣೆಯ ಜಾಗತಿಕ ಪೂರೈಕೆ ಇಳಿಕೆಯಾಗುವ ಸಾಧ್ಯತೆಯಿದ್ದು ಇದರಿಂದ ಪಾಮೆಣ್ಣೆ ದರ ಮತ್ತಷ್ಟು ಹೆಚ್ಚಳ ಸಾಧ್ಯತೆಯಿದೆ.

## ಜಾಗತಿಕ ಸೋಯಾಬೀನ್ ಹಾಗೂ ಉತ್ಪಾದನೆಗಳ ಪೂರೈಕೆ ಬಿಗು

ಪ್ರತಿಕೂಲ ಹವಾಮಾನದಿಂದ ಉತ್ಪಾದನೆ ಇಳಿಕೆ, ಅರ್ಜೆಂಟಿನಾ ಮುಂತಾದ ರಫ್ತು ದೇಶಗಳಿಂದ ರಫ್ತು ಇಳಿಕೆಯಿಂದ ಜಾಗತಿಕ ಮಾರುಕಟ್ಟೆಗೆ ಸೋಯಾಬೀನ್, ಸೋಯಾಬೀನ್ ಎಣ್ಣೆ ಹಾಗೂ ಸೋಯಾ ಮೀಲ್‌ಗಳ ಪೂರೈಕೆ ಇಳಿಕೆಯಾಗುತ್ತಿದ್ದು, ಪೂರೈಕೆ ಬಿಗುವಿನಿಂದ ಕೂಡಿದೆ. ಇದರಿಂದ ಇವುಗಳ ದರ ಹೆಚ್ಚಳವಾಗುತ್ತಿದ್ದು ಮತ್ತಷ್ಟು ಹೆಚ್ಚಳವಾಗುವ ಸಾಧ್ಯತೆಯಿದೆ.